## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :1042
ಸದಸ್ಯರ ಹೆಸರು :ಶ್ರೀ ಪಿ.ಹೆಚ್. ಪೂಜಾರ್
ಉತ್ತರಿಸುವ ಸಚಿವರು :ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ :20.08.2025

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದ ಹಲವು ಜಿಲ್ಲೆಗಳು ಸೇರಿದಂತೆ ಬಾಗಲಕೋಟೆ ಜಿಲ್ಲೆಯಿಂದಲೂ ದಿನನಿತ್ಯ 3000ಕ್ಕಿಂತ ಹೆಚ್ಚು ಜನರು ರಾಜಧಾನಿ ಬೆಂಗಳೂರಿಗೆ ಕೆಲಸದ ನಿಮಿತ್ತವಾಗಿ ಬಂದು ಹೋಗುತ್ತಿದ್ದು, ಸರ್ಕಾರ ಅವರ ಅನುಕೂಲಕ್ಕಾಗಿ ಈವರೆಗೂ ಒಂದೇ ಒಂದು ವೋಲ್ವೋ, ಹವಾ ನಿಯಂತ್ರಿತ ಸರ್ಕಾರಿ ಬಸ್‌ಗಳನ್ನು ಒಡಿಸದಿರಲು ಕಾರಣವೇನು;</td><td>ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ 2023-24 ಮತ್ತು 2024-25ನೇ ಸಾಲಿನಲ್ಲಿ ಖರೀದಿಸಿ ಸೇರ್ಪಡೆಗೊಳಿಸಿರುವ ಹೊಸ ಬಸ್‌ಗಳ ವಿವರ ಕೆಳಕಂಡಂತಿದೆ:
<table>
<tr><th>2023-24</th><th>2024-25</th><th>ಒಟ್ಟು</th></tr>
<tr><td>296</td><td>560</td><td>856</td></tr>
</table>
ಪ್ರಸ್ತುತ ಸಂಸ್ಥೆಯಲ್ಲಿ 10 ನಾನ್ ಎ/ಸಿ (ಪಲ್ಲಕ್ಕಿ) ಮತ್ತು 14 ಎ/ಸಿ ಬಸ್‌ಗಳನ್ನು ಖರೀದಿಸುವ ಕ್ರಮ ಪ್ರಗತಿಯಲ್ಲಿದೆ. ಸಂಸ್ಥೆಯಲ್ಲಿ ಹೆಚ್ಚುವರಿ ವೋಲ್ವೋ ಹವಾನಿಯಂತ್ರಿತ ಬಸ್ಸುಗಳು ಪ್ರಸ್ತುತ ಲಭ್ಯವಿಲ್ಲದಿರುವ ಕಾರಣ ಪ್ರತಿಷ್ಠಿತ ನಾನ್ ಎಸಿ ಸ್ಲೀಪರ್ ಬಸ್ಸನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.</td></tr>
<tr><td>ಆ</td><td>ಇದನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವ ಖಾಸಗಿ ಬಸ್ ಮಾಲೀಕರು ಅನಿಯಂತ್ರಿತ ದರಗಳನ್ನು ಪ್ರಯಾಣಿಕರ ಮೇಲೆ ಹೇರುತ್ತಿದ್ದು, ಪ್ರಯಾಣಿಕರು ಶೋಷಣೆಗೆ ಒಳಗಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಖಾಸಗಿ ಬಸ್ ಮಾಲೀಕರು ಪ್ರಯಾಣಿಕರಿಂದ ನಿಗದಿಗಿಂತ ಹೆಚ್ಚಿನ ದರಗಳನ್ನು ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಪ್ರವರ್ತನ ಸಮಯದಲ್ಲಿ ಇಂತಹ ವಾಹನಗಳು ಕಂಡುಬಂದಲ್ಲಿ ಅವುಗಳ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಂಡು ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ.<br><br>ಅಲ್ಲದೇ ಇಂತಹ ವಾಹನಗಳ ವಿರುದ್ಧ ವಿಶೇಷ ಪ್ರವರ್ತನ ಕಾರ್ಯಗಳನ್ನು ಸಹ ಹಮ್ಮಿಕೊಂಡಿದ್ದು, ದಿನಾಂಕ:01-04-2024 ರಿಂದ 31-07-2025 ರವರೆಗೆ ಒಟ್ಟು 1207 ವಾಹನಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಿ ರೂ.61,53,307/-ಗಳನ್ನು ದಂಡದ ರೂಪದಲ್ಲಿ ಸಂಗ್ರಹಿಸಲಾಗಿರುತ್ತದೆ.</td></tr>
<tr><td>ಇ</td><td>ಬಂದಿದ್ದಲ್ಲಿ, ಪ್ರಯಾಣಿಕರ ಶೋಷಣೆ ತಪ್ಪಿಸಲು ಜಿಲ್ಲೆಯ ಬೇರೆ ಬೇರೆ ಭಾಗಗಳಿಂದ ಬೆಂಗಳೂರಿಗೆ ಬರಲು ವೋಲ್ವೋ ಮತ್ತು ಹವಾನಿಯಂತ್ರಿತ ಬಸ್‌ಗಳನ್ನು ಯಾವ ಕಾಲಮಿತಿಯಲ್ಲಿ ಒದಗಿಸಲಾಗುವುದು?</td><td>ಬಾಗಲಕೋಟೆ ಜಿಲ್ಲೆಯಿಂದ ಬೆಂಗಳೂರಿಗೆ 2 ನಾನ್ ಎಸಿ ಸ್ಲೀಪರ್ ಸಾರಿಗೆಗಳು (ಬೀಳಗಿ-ಬಾಗಲಕೋಟೆ-ಬೆಂಗಳೂರು ಹಾಗೂ ಬಾದಾಮಿ-ಗುಳೇದಗುಡ್ಡ–ಇಳಕಲ್–ಬೆಂಗಳೂರು ಮಾರ್ಗಗಳಲ್ಲಿ) ಕಾರ್ಯಾಚರಣೆಯಲ್ಲಿವೆ.<br><br>ಪ್ರಸ್ತುತ ಸಂಸ್ಥೆಯಲ್ಲಿ 10 ನಾನ್ ಎ/ಸಿ (ಪಲ್ಲಕ್ಕಿ) ಮತ್ತು 14 ಎ/ಸಿ ಬಸ್‌ಗಳನ್ನು ಖರೀದಿಸುವ ಕ್ರಮ ಪ್ರಗತಿಯಲ್ಲಿರುತ್ತದೆ.<br><br>ವೋಲ್ವೋ ಮತ್ತು ಹವಾನಿಯಂತ್ರಿತ ಬಸ್ಸುಗಳು ಲಭ್ಯತೆಯ ನಂತರ ಸಾರ್ವಜನಿಕ ಬೇಡಿಕೆ/ ಅವಶ್ಯಕತೆಗೆ ಅನುಸಾರವಾಗಿ ಆದ್ಯತೆಯ ಮೇರೆಗೆ ಕಾರ್ಯಾಚರಣೆಗೊಳಿಸಲು ಕ್ರಮ ಕೈಗೊಳ್ಳಲಾಗುವುದು.</td></tr>
</table>

ಸಂಖ್ಯೆ: ಟಿಡಿ 181 ಟಿಸಿಕ್ಯೂ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು